ವಾರದ ಪತ್ರ

## ತಪ್ಪು ಉಚ್ಚರಣೆ

‘ತಪ್ಪಾಗೊದು ದೊಡ್ಡ ವಿಷಯವಲ್ಲ ಸರಿ ಮಾಡ್ಕೊಳ್ಳೊದು ಸಣ್ಣ ವಿಚಾರವೂ ಅಲ್ಲ’ ಇದು ಕನ್ನಡತಿಯ ದಿನನಿತ್ಯದ ಪಾಠ. ಪ್ರತಿದಿನವೂ ಸಂಚಿಕೆಯ ಕಡೆಯಲ್ಲಿ ಕನ್ನಡ ಶಬ್ದ, ವ್ಯಾಕರಣ, ಆಡು ಭಾಷೆ, ಪದಗಳ ಜೋಡಣೆ ಬಗ್ಗೆ ಪಾಠ ಕಲಿಸುವ ಕನ್ನಡತಿಗೆ ತನ್ನ ಧಾರಾವಾಹಿಯಲ್ಲಿನ ಪದದ ತಪ್ಪು ಉಚ್ಚಾರಣೆಯು ಅರಿವಿಗೆ ಬಾರದೆ ಹೋದದ್ದು ವಿಪರ್ಯಾಸ. ಸಾನಿಯ ಮತ್ತು ಅವಳ ತಾಯಿಯ ನಡುವಿನ ಸಂಭಾಷಣೆಯಲ್ಲಿ ತಾಯಿಯು ಮಗಳಿಗೆ ‘ನೀನು ಏನೇನೋ ಹೇಳ್ತಾ ನಿನ್ನ ತಲೆ ಕೆಡಿಸ್ಕೊಂಬೇಡ. ನನ್ನ ತಲೇನೂ ಕೆಡಿಸಬೇಡ’ ಎಂದು ಹೇಳುತ್ತಾಳೆ. ನಾವು ಕನ್ನಡ ವಿದ್ವಾಂಸರಲ್ಲದಿದ್ದರೂ ಆಡು ಭಾಷೆ ಕನ್ನಡದ ಬಗ್ಗೆ ಸಾಧಾರಣ ತಿಳಿವಳಿಕೆ ಇದೆ. ‘ಕೆಡಿಸ್ಕೊಂಬೇಡ’ ಎಂಬ ಪದದ ಉಚ್ಚಾರಣೆ ತಪ್ಪು. ‘ಕೆಡಿಸ್ಕೊಬ್ಯಾಡ’ ಅಥವಾ ‘ಕೆಡಿಸಿಕೊಳ್ಳಬೇಡ’ ಎಂದಾಗಬೇಕಿತ್ತು. ಇಲ್ಲಿ ಅನುಸ್ವಾರದ (ಂ) ಅವಶ್ಯಕತೆ ಇಲ್ಲ ಎಂಬುದು ನನ್ನ ಅಭಿಪ್ರಾಯ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಹಾಸ್ಯಕ್ಕೆ ಉನ್ನತಿ ಬೇಕು

ಸ್ಟಾರ್ ಸುವರ್ಣದ ‘ಕಾಮಿಡಿ ಉತ್ಸವ’ ಮತ್ತು ‘ಗಾನ ಬಜಾನ 2’ ಹಾಸ್ಯ ಪ್ರಧಾನವಾಗಿದ್ದರೂ ಕೆಲವು ದೃಶ್ಯಗಳು ಮುಜುಗರಗೊಳಿಸಿದವು. ಪಾತ್ರದಾರಿಗಳಲ್ಲಿ ಜೀವಂತಿಕೆ ಇದ್ದರೂ ನಿರ್ದೇಶನ ಪೇಲವವಾಗಿ ಇರುವುದು ಕಂಡುಬಂದಿತು.

ಮದುವೆ ಮಾಡಿಕೊಳ್ಳಲು ಹೊರಟಿದ್ದ ಪ್ರೇಮಿಗಳು ವಿತಂಡ ವಾಗ್ವಾದದ ಸಂದರ್ಭದಲ್ಲಿ ಒದೆಯುವ ಕೀಳುದರ್ಜೆಯ ಹಾಸ್ಯಮಯದಿಂದ ಅಷ್ಟೊಂದು ರಂಜಿಸಲಿಲ್ಲ. ಯುವಜನತೆಗೆ ಅಡ್ಡ ದಾರಿಯನ್ನು ಸೂಚಿಸಿದಂತಿತ್ತು. ಹಾಸ್ಯವನ್ನು ಉನ್ನತ ಮಟ್ಟದಲ್ಲೂ ಸೃಷ್ಟಿಸಬಹುದು.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## ಪಕ್ಷ - ವ್ಯಕ್ತಿ ನಿಷ್ಟೆಯ ಅಬ್ಬರದಲ್ಲಿ

ಸುದ್ದಿವಾಹಿನಿಗಳು ಪಕ್ಷಾತೀತವಾಗಿರಬೇಕು. ವ್ಯಕ್ತಿ ಕೇಂದ್ರೀಕೃತವಾಗಿರಬಾರದು ಮತ್ತು ವಸ್ತು ನಿಷ್ಟರಾಗಿರಬೇಕು ಎನ್ನುವುದು ವೀಕ್ಷಕರ ತೀರಾ ಸಾಮಾನ್ಯ ನಿರೀಕ್ಷೆ. ಅದರೆ, ಕನ್ನಡದ ಕೆಲವು ಸುದ್ದಿ ವಾಹಿನಿಗಳನ್ನು ವೀಕ್ಷಿಸುವಾಗ ಈ ನಿರೀಕ್ಷೆ ಕುಸಿದು ಹೋಗುತ್ತದೆ. ಕೆಲವು ವಾಹಿನಿಗಳು ನಿರಂತರವಾಗಿ ವ್ಯಕ್ತಿ ಪೂಜೆ ಮತ್ತು ಪಕ್ಷ ಪೂಜೆಯನ್ನೇ ಮಾಡುತ್ತಿವೆ. ಇನ್ನು ಕೆಲವು ವ್ಯಕ್ತಿ ಮತ್ತು ಪಕ್ಷ ಟೀಕೆಯನ್ನೇ ಬಂಡವಾಳ ಮಾಡಿಕೊಂಡಂತೆ ಕಾಣುತ್ತದೆ. ಈ ಹಿತಾಸಕ್ತಿ ಮೇಲಾಟದಲ್ಲಿ ವಾಸ್ತವವನ್ನು ಜನರಿಂದ ಮುಚ್ಚಿಡಲಾಗುತ್ತದೆ. ಸುದ್ದಿ ಯಾವುದೇ ಇರಲಿ, ಈ ವಾಹಿನಿಗಳು ತಮ್ಮ ಮೂಗಿನ ನೇರಕ್ಕೆ ಮತ್ತು ರಾಜಕೀಯ ಮತ್ತು ಸೈದ್ಧಾಂತಿಕ ನಿಲುವಿಗೆ ಅನುಗುಣವಾಗಿ ಪ್ರಚುರಪಡಿಸುತ್ತವೆ. ಒಂದೇ ಸುದ್ದಿಯನ್ನು ವಿವಿಧ ವಾಹಿನಿಗಳಲ್ಲಿ ನೋಡುವಾಗ ‘ಆನೆ ಮತ್ತು ಐವರು ಕುರುಡರು’ ಕಥೆ ನೆನಪಿಗೆ ಬರುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ಸಿನಿ ಚಂದನ ಆರಂಭವಾಗಲಿ.

ಕನ್ನಡದ ಹೆಮ್ಮೆಯ ಚಂದನ ವಾಹಿನಿಯು ಜ್ಞಾನ, ಮನೋರಂಜನೆ, ಸುದ್ದಿ ಸಮಾಚಾರಗಳಿಂದ ಜನಮನ್ನಣೆ ಗಳಿಸಿದೆ. ಮೂರು ಕೋಟಿ ಕನ್ನಡಿಗರು ಇದ್ದಾಗಲೂ, ಏಳು ಕೋಟಿ ಕನ್ನಡಿಗರಾದಗಲೂ ಒಂದೇ. ಖಾಸಗಿ ವಾಹಿನಿಗಳಲ್ಲಿ ಸಿನಿಮಾ ನೋಡಲು ಜಾಹೀರಾತುಗಳ ಅಬ್ಬರವನ್ನು ಅನಿವಾರ್ಯವಾಗಿ ಅನುಭವಿಸಬೇಕು. ಪ್ರಸಾರ ಮಾಡಿದ ಸಿನಿಮಾಗಳನ್ನೆ ಪ್ರಸಾರ ಮಾಡುತ್ತಿರುತ್ತಾರೆ. ಹಾಗಾಗಿ ಚಂದನ ವಾಹಿನಿಯವರು ಸಿನಿ ಚಂದನ ಹೆಸರಿನಲ್ಲಿ ಸಿನಿಮಾ ಚಾನಲ್ ಆರಂಭಿಸಲಿ. ಅದರಲ್ಲಿ ಭಕ್ತಿ ಪ್ರಧಾನ, ರಾಜ್ಯ – ರಾಷ್ಟ್ರ ಪ್ರಶಸ್ತಿ ಪಡೆದ ಸಿನಿಮಾ ಸೇರಿ, ಮಕ್ಕಳ ಚಿತ್ರ, ಕಿರುಚಿತ್ರಗಳನ್ನು ಪ್ರದರ್ಶನ ಮಾಡುವಂತಾಗಲಿ. ಚಿತ್ರಗಳ ಮರುಪ್ರದರ್ಶನ ಮಾಡುವುದಾದರೆ ಒಂದು ವರ್ಷವಾದರೂ ಅಂತರವಿರಲಿ ಎಂದು ಆಶಿಸುತ್ತೇನೆ.

—ಮಲ್ಲಿಕಾರ್ಜುನ ಸುರಧೇನುಪುರ

## ಹೃಷಿಕೇಶದಲ್ಲಿ ಕಾಣೆಯಾದ ಗಿಣಿರಾಮ

ಕಲರ್ಸ್ ಕನ್ನಡದ ‘ಗಿಣಿರಾಮ’ದಲ್ಲಿ ಕಥೆಗೆ ಸಂಬಂಧವಿಲ್ಲದಿದ್ದರೂ ನಾಯಕ, ನಾಯಕಿಯರನ್ನು ಒಮ್ಮೆಲೇ ಹೃಷಿಕೇಶಕ್ಕೆ ಕಳಿಸಿದ್ದಾರೆ. ತಿಂಗಳು ಸಮೀಪಿಸಿದರೂ ಅವರು ಹಿಂದಿರುಗುವ ಸೂಚನೆ ಕಾಣುತ್ತಿಲ್ಲ. ಗುಡ್ಡ, ಬೆಟ್ಟ ಅಲೆದಾಟ, ಕಿಡ್ನಾಪ್ ಹೊಡೆದಾಟದ ಪ್ರಹಸನ. ಮನೆಯಲ್ಲಿ ಮಹತಿಯ ಅತ್ತೆ ಎಲ್ಲದಕ್ಕೂ ಬಯ್ದು ಸ್ವಾಟೆ ತಿವಿಯಲು ಸೊಸೆಯಿಲ್ಲದೇ ಬಸವಳಿದಿದ್ದಾಳೆ. ಆಯಿ ಸಾಹೇಬರು ಈ ಬಾರಿ ಮಹತಿಗೆ ಯಾವ ಸವಾಲೊಡ್ಡಲಿ ಎಂದು ಯೋಚಿಸುತ್ತಿದ್ದಾರೆ. ನಮ್ಮ ಸಹನೆಗೂ ಒಂದು ಮಿತಿಯಿರುತ್ತದೆ. ಶಿವರಾಂ, ಮಹತಿಯರನ್ನು ವಾಪಸ್ ಅವರ ಹಳ್ಳಿಗೆ ಕರೆತಂದು ಕಥೆಯನ್ನು ಸುಗಮಗೊಳಿಸಿ.

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ

## ಸಾರ್ಥಕ ಕಾರ್ಯ

ಚೆಂದನದ ‘ಥಟ್ ಅಂತ ಹೇಳಿ’ ಜನಪ್ರಿಯ ಕಾರ್ಯಕ್ರಮ 20 ವರ್ಷ ಪೂರೈಸಿದೆ. ಅದರ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಭಾಗವಹಿಸಿದ್ದರು. ನಿರೂಪಕ ಡಾ. ನಾ. ಸೋಮೇಶ್ವರ ಈ ಕಾರ್ಯಕ್ರಮದ ಮುಖ್ಯ ಉದ್ದೇಶ, ಅದರ ಹುಟ್ಟು ಮತ್ತು ಸಾಗಿ ಬಂದ ವಿವಿಧ ಮಜಲುಗಳನ್ನು ಪರಿಚಯಿಸಿದರು.

ಇಲ್ಲಿಯವರೆಗೆ ಸುಮಾರು ಐವತ್ತು ಸಾವಿರ ಪ್ರಶ್ನೆಗಳನ್ನು ಕೇಳಲಾಗಿದ್ದು ಬಹುಮಾನ ರೂಪದಲ್ಲಿ ಐವತ್ನಾಲ್ಕು ಸಾವಿರ ಪುಸ್ತಕಗಳನ್ನು ನೀಡಲಾಯಿತು. ಪ್ರೇಕ್ಷಕರಲ್ಲಿ ಓದಿನ ಹವ್ಯಾಸವನ್ನು ಕುದುರಿಸುವ ಒಂದು ಪ್ರಯತ್ನ ಇದಾಗಿತ್ತು. ಮಾಹಿತಿ, ತಂತ್ರಜ್ಞಾನ ಮತ್ತು ಮನರಂಜನೆಯ ಮೂಲ ಉದ್ದೇಶವನ್ನು ಇಟ್ಟುಕೊಂಡು ಈ ಕಾರ್ಯಕ್ರಮ ರೂಪಿಸಲಾಗುತ್ತಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ‘ಥಟ್’ಗೆ 20 ವರ್ಷ

ಅಬ್ಬಬ್ಬಾ! ಥಟ್ ಅಂತ ಹೇಳಿ ಕಾರ್ಯಕ್ರಮ ಶುರುವಾಗಿ 20 ವರ್ಷಗಳಾಗಿವೆ ಎಂದು ಜನವರಿ 4 ರಂದು ನಡೆದ ಕಾರ್ಯಕ್ರಮ ವೀಕ್ಷಿಸಿದಾಗ ಗೊತ್ತಾಯಿತು. ಸುಮಾರಾಗಿ ನಾನು ಪಿಯುಸಿ ಓದುತ್ತಿದ್ದಾಗಿನಿಂದಲೂ ನೋಡುತ್ತಾ ಬಂದಿದ್ದೇನೆ. ಎಲ್ಲವೂ ಮೊನ್ನೆ ಮೊನ್ನೆ ನೋಡಿದ ಹಾಗಿದೆ. ಈಗ ನನ್ನ ಮಕ್ಕಳು ಶಾಲೆಗೆ ಹೋಗುತ್ತಾರೆ. ಅವರೂ ಈ ಕಾರ್ಯಕ್ರಮವನ್ನು ನೋಡುತ್ತಿದ್ದಾರೆ.

ನಾನೀಗ ಹೇಳಹೊರಟಿರುವುದು 20 ವರ್ಷ ಎಂದರೆ ಕಡಿಮೆ ಏನಲ್ಲ. ಅದರಲ್ಲೂ ಒಬ್ಬರೇ ನಿರೂಪಕರು 20 ವರ್ಷದಿಂದ ಕಾರ್ಯಕ್ರಮ ನಡೆಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. 20ನೇ ವಾರ್ಷಿಕೋತ್ಸವವನ್ನು ಆಡಂಬರವಿಲ್ಲದೆ ಸರಳ ಮತ್ತು ಸುಂದರವಾಗಿ ನಡೆಸಿಕೊಟ್ಟ ರೀತಿ ತುಂಬಾ ಮೆಚ್ಚುಗೆಯಾಯಿತು.

—ಶ್ರೇಯ ಕೆ.ಎಂ., ಶಿವಮೊಗ್ಗ

## ಹಿರಿಯರನ್ನೂ ನೆನೆಯಿರಿ

ಚಂದನವೂ ಸೇರಿದಂತೆ ಬಹುತೇಕ ಎಲ್ಲ ವಾಹಿನಿಗಳು ನಟ ಪುನೀತ್ ಕುರಿತ ಕಾರ್ಯಕ್ರಮ ಪ್ರಸಾರ ಮಾಡಿದ್ದು ನಿಜಕ್ಕೂ ಶ್ಲಾಘನೀಯ. ಆದರೆ ಇದೇ ಸಮಯದಲ್ಲಿ ನಮ್ಮನ್ನಗಲಿದ ಅಭಿನಯ ಶಾರದೆ ಜಯಂತಿ ಮತ್ತು ನಟ ಶಿವರಾಂ ಅವರನ್ನು ಕುರಿತ ಕಾರ್ಯಕ್ರಮಗಳು ಪ್ರಸಾರವಾಗದೆ ಇರುವುದು ಖಂಡನೀಯ.

ಹಾಗೆಯೇ ನೇತ್ರದಾನದ ಬಗ್ಗೆ ಪದೇ ಪದೇ ಹೇಳುವ ವಾಹಿನಿಗಳಿಗೆ ದೇಹದಾನ ಮಾಡಿದ ಅದ್ಭುತ ಕಲಾವಿದ ಲೋಕೇಶ್ ನೆನಪಾಗುವುದಿಲ್ಲ. ಇನ್ನು ಸಂಗೀತ ಕಾರ್ಯಕ್ರಮಗಳಲ್ಲಿ ಪಿ.ಬಿ. ಶ್ರೀನಿವಾಸ್ ಕುರಿತು ಮಾತನಾಡಿದ ಉದಾಹರಣೆ ಕಡಿಮೆ. ಗಳಿಲ್ಲ.

—ಜಗದೀಶ ಬಿ. ಹೊಸೂರು, ಮೈಸೂರು